# ಪಾಂಚಜನ್ಯ

**ಕವಿತಾ ಎಂ.ಎನ್.**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಮದ್ದಾನೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಬ್ಬಹಳ್ಳಿ, ಗುಂಡ್ಲುಪೇಟೆ, ಚಾಮರಾಜನಗರ.

**DOI: https://doi.org/10.5281/zenodo.22899636**

**ABSTRACT:**

ಆಧುನಿಕ ಕನ್ನಡ ಸಾಹಿತ್ಯ ಲೋಕದ ಧ್ರುವತಾರೆ, ಜಗದಕವಿ, ರಸಋಷಿ ಮೊದಲಾದ ಹತ್ತಾರು ಅಭಿದಾನಗಳಿಗೆ ಪಾತ್ರರಾದವರು ರಾಷ್ಟ್ರಕವಿ ಕುವೆಂಪು. ಅವರಲ್ಲಿದ್ದ ಜಾಗೃತ ಪ್ರಜ್ಞೆ, ದರ್ಶನ ಶಕ್ತಿ, ಸಮ ಸಮಾಜ ಕಟ್ಟುವ ಹಂಬಲ, ಯುವಕರ ಬಗೆಗಿದ್ದ ಅದಮ್ಯ ಪ್ರೀತಿ ಮೊದಲಾದವು ಅವರು ಶತಮಾನದ ಕವಿಯಾಗಲು ಪ್ರೇರಣೆಯಾದ ಸಂಗತಿ.

ಇವರು ಬರೆದ ಅನೇಕ ಕವನ ಸಂಕಲನಗಳಲ್ಲಿ ಅತ್ಯಂತ ಪ್ರಮುಖವಾದುದು ಪಾಂಚಜನ್ಯ. ಇದು ವೈಚಾರಿಕ ಸಂಕಲನ ಎಂದೇ ಪ್ರಸಿದ್ಧವಾಗಿದೆ. ಇದನ್ನು ಕುವೆಂಪು ಅವರು ಬರೆದದ್ದು ತಾರುಣ್ಯದ ಆರಂಭಿಕ ಹಂತದಲ್ಲಿ. ಆ ಹೊತ್ತಿನ ಸಾಮಾಜಿಕ, ಆರ್ಥಿಕ, ರಾಜಕೀಯ ಸನ್ನಿವೇಶಗಳಿಗೆ ಕವಿಯಾಗಿ ಕುವೆಂಪು ಅವರ ಒಟ್ಟಾರೆ ಸ್ಪಂದನೆ ಏನು ಎಂಬುದನ್ನು ಪಾಂಚಜನ್ಯ ಕವನ ಸಂಕಲನ ಕಟ್ಟಿಕೊಡುವಲ್ಲಿ ಅತ್ಯಂತ ಯಶಸ್ವಿಯಾಗಿದೆ ಮತ್ತು ಮಾದರಿಯಾದ ಸಂಗತಿಗಳನ್ನು ಒಳಗೊಂಡಿದೆ. ಇಂತಹ ಅಮೂಲ್ಯ ಕವನ ಸಂಕಲನದ ಪರಿಚಯಾತ್ಮಕ ನೋಟ ಮತ್ತು ವಿಶ್ಲೇಷಣೆಯನ್ನು ಕಟ್ಟಿಕೊಡುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ.

**KEYWORDS:**

ನವೋದಯ, ಕಾವ್ಯಮಾಧುರ್ಯತೆ, ಅರಸೊತ್ತಿಗೆ, ಕಟ್ಟಪ್ಪಣೆ, ಸ್ವಾತಂತ್ರ್ಯೋತ್ಸಾಹ, ವಿಪ್ಲವಮೂರ್ತಿ.

ರಾಷ್ಟ್ರಕವಿ ಕುವೆಂಪು ಅವರು 1933ರಲ್ಲಿ 'ಪಾಂಚಜನ್ಯ' ಕವನ ಸಂಕಲನವನ್ನು ಪ್ರಕಟಿಸಿದರು. ಆಗತಾನೆ ಅಧ್ಯಾಪನಾ ವೃತ್ತಿಗೆ ಕಾಲಿಟ್ಟಿದ್ದ, ತಾರುಣ್ಯದ ಗಳಿಗೆಯಲ್ಲಿ ಬರೆದ ಹತ್ತೊಂಬತ್ತು ಕವನಗಳು ಈ ಸಂಕಲನದಲ್ಲಿವೆ. ಈ ಮೊದಲು 'ಕೊಳಲು' ಹೆಸರಿನ ಕವನಸಂಕಲನ ಪ್ರಕಟಿಸಿದ್ದ ಕುವೆಂಪು ಅವರು 'ಪಾಂಚಜನ್ಯ' ಎಂದು ರಣಕಹಳೆ ನೀಡುವಂತಹ ಹೆಸರಿನ ಸಂಕಲನ ಪ್ರಕಟಿಸಿದ್ದು ಮಹತ್ವದ ಬೆಳವಣಿಗೆಯೇ ಸರಿ.

"ನವೋದಯ ಕಾವ್ಯಮಾಧುರ್ಯತೆಗೆ, ಪರಿಸರ ಪ್ರಿಯತೆಗೆ, ಜೀವನಪ್ರೀತಿಗೆ ಗೊಲ್ಲನ ಪ್ರೀತಿಯ ಕೊಳಲು ಪ್ರತೀಕವಾಗಿ ನಾದಗೈದರೆ, ಅದೇ ಕೃಷ್ಣನ ಪಾಂಚಜನ್ಯ ಹೆಸರಿನ ಶಂಖ ನವೋದಯ ಸಂದರ್ಭದ ರಾಷ್ಟ್ರೀಯ ಹಿತಾಸಕ್ತಿಯನ್ನು ಯುವಕರಲ್ಲಿ ಬಲಗೊಳಿಸುವ ರಣೋತ್ಸಾಹಕ್ಕೆ ನಾಂದಿ ಹಾಡುತ್ತದೆ".

**ಇಂಚರದ ಕೊಳಲು ಬಿರಿದು**
**ಕಠೋರ ಭೇರಿಯಾಗುತ್ತಿದೆ**

ರಕ್ತಧುನಿ ಕವಿತೆಯಲ್ಲಿ ಬರುವ ಈ ಸಾಲುಗಳು, ಮೇಲಿನ ನನ್ನ ಅಭಿಪ್ರಾಯಕ್ಕೆ ಸಾಕ್ಷ್ಯವಾಗಿದೆ.

ಅರಸೊತ್ತಿಗೆ, ಸ್ವಾತಂತ್ರ್ಯಹೀನತೆ, ದಾರಿದ್ರ್ಯ ಮೊದಲಾದ ಅನಿಷ್ಟಗಳ ವಿರುದ್ಧ ಸಾರಿದ ರಣ ಕಹಳೆಯೇ 'ಪಾಂಚಜನ್ಯ'ವಾಗಿ ರೂಪಪಡೆದಿದೆ. ಈ ಹಿನ್ನೆಲೆಯಲ್ಲಿ ಈ ಸಂಕಲನದ ಕವನಗಳನ್ನು ಅರಸೊತ್ತಿಗೆ ವಿರೋಧಿ ರಚನೆಗಳು, ಸ್ವಾತಂತ್ರ್ಯೋತ್ಸಾಹಿ ರಚನೆಗಳು, ದಾರಿದ್ರ್ಯವಿರೋಧಿ ರಚನೆಗಳು ಮತ್ತು ಇತರೆ ಕವಿತೆಗಳೆಂದು ವರ್ಗೀಕರಿಸಬಹುದು.

ಜಡಗೊಂಡಿದ್ದ ಸಮಾಜದಲ್ಲಿ ಚೈತನ್ಯ ತಂದು, ಸಾಮಾಜಿಕ ಅನಿಷ್ಟಗಳನ್ನೆಲ್ಲಾ ಹೊರದೂಡಲು ಕಾವ್ಯಕ್ಕಿಂತ ಪರಿಣಾಮಕಾರಿಯಾದ ದಾರಿ ಮತ್ತೊಂದಿಲ್ಲ ಎಂಬುದು ಕುವೆಂಪು ಅವರಿಗೆ ಆ ತಾರುಣ್ಯದ ಗಳಿಗೆಯಲ್ಲೇ ಚೆನ್ನಾಗಿ ತಿಳಿದಿತ್ತು. ಹಾಗಾಗಿ ಅವರ ಕಾವ್ಯಯಾನ ಬಹಳ ವಿಸ್ತಾರವೂ ಸಮಾಜಮುಖಿಯೂ ಆಗಿದೆ ಮತ್ತು ಆ ಕವಿತೆಗಳು ಇಂದಿಗೂ ನಮ್ಮ ನಡುವಿನ ಮಾರ್ಗದರ್ಶಿಗಳಾಗಿ ಮುಂದಡಿ ಇಡುತ್ತಲೇ ಸಾಗುತ್ತಿವೆ. ಈ ಇಡೀ ಸಂಕಲನ ವೈಚಾರಿಕ ಪ್ರಜ್ಞೆಯ ಸಂಕಲನ ಎಂದೇ ಪ್ರಸಿದ್ಧವಾಗಿದೆ.

**ಹಾಡು ಗೆಳೆಯನೆ, ಹಾಡು**
**ಹಾಡಿನಿಂದಲೇ ನಾಡು**
**ಕಣ್ದೆರೆದು ನೆಚ್ಚುದಿರಿ ಕೆಚ್ಚಿನಿಂ ನಿನ್ನ ಹಿಂಬಾಲಿಪಂತೆ!**
**ಹಾಡೇ ಬಾಳಿಗೆ ಭಕ್ತಿ,**
**ಹಾಡೇ ಜೀವಕೆ ಶಕ್ತಿ.**

ಮಲ್ಲಗೀತೆಯಲ್ಲಿ ಬರುವ ಈ ಸಾಲುಗಳು ಹಾಡಿನ ಶಕ್ತಿಯನ್ನು ಹೇಳುತ್ತಲೇ ಕಾವ್ಯಶಕ್ತಿಯನ್ನು ಗ್ರಹಿಸುವ ಕಡೆ ಯುವಕರನ್ನು ಉತ್ತೇಜಿಸುವ ಪ್ರಯತ್ನ ಮಾಡಿದೆ.

ಅರಸೊತ್ತಿಗೆ ವಿರೋಧಿ ರಚನೆಗಳು – 1930ರ ಅವಧಿಯಲ್ಲಿ ರಾಜಪ್ರಭುತ್ವ ಅತ್ಯಂತ ಬಲಿಷ್ಠವಾಗಿತ್ತು. ಕುವೆಂಪು ಅವರು ಕಾರ್ಯನಿರ್ವಹಿಸುತ್ತಿದ್ದ ಮಹಾರಾಜ ಕಾಲೇಜು ಪ್ರಭುತ್ವದ ವ್ಯಾಪ್ತಿಯೊಳಗೆ ಇದ್ದರೂ ಅರಸರನ್ನು ಧಿಕ್ಕರಿಸಿ ಪ್ರಜಾಪ್ರಭುತ್ವವನ್ನು ನೆಲೆಗೊಳಿಸುವ ಹಂಬಲ ಕುವೆಂಪು ಅವರದಾಗಿತ್ತು. ಅರಸೊತ್ತಿಗೆ ಎಂಬುದು ಶೋಷಣೆಯ ಕೇಂದ್ರವಾಗಿದ್ದು, ಪುರೋಹಿತಶಾಹಿಯನ್ನು ಬೆಂಬಲಿಸುವ, ಬಲಿಸುವ ಕೇಂದ್ರವಾಗಿತ್ತು. 'ನವಭಾರತ'ದ ಕನಸುಗಾರರಾಗಿದ್ದ ಕುವೆಂಪು ಅವರು ಬ್ರಿಟಿಷರನ್ನು ವಿರೋಧಿಸಿದ್ದಕ್ಕಿಂತ ಸ್ಥಳೀಯ ರಾಜರನ್ನು ವಿರೋಧಿಸಿದ್ದೇ ಹೆಚ್ಚು. 'ಕವಿ' ಕವನದಲ್ಲಿ ಅರಸೊತ್ತಿಗೆಯನ್ನು ನಿರ್ಭೀತತೆಯಿಂದ ನಿರಾಕರಿಸಿರುವುದನ್ನು ಗಮನಿಸಬಹುದು.

**ವಸಂತವನದಲಿ ಕೂಗುವ ಕೋಗಿಲೆ**
**ರಾಜನ ಬಿರುದನು ಬಯಸುವುದಿಲ್ಲ.**
**ಹೂವಿನ ಮರದಲಿ ಜೇನುಹುಳುಗಳು**
**ಮೊರೆವುದು ರಾಜನ ಭಯದಿಂದಲ್ಲ.**

ಪ್ರಕೃತಿ ಹೇಗೆ ರಾಜನ ಅಡಿಯಾಳಲ್ಲವೋ ಕವಿಯು ಹಾಗೆಯೇ ಎಂಬುದು ಕವಿಭಾವ. ಕವಿಯ ಆಲೋಚನೆ, ಭಾವನೆಗಳಿಗೆ ಯಾರ ಕಟ್ಟಪ್ಪಣೆಯೂ ಬೇಕಿಲ್ಲವೆನ್ನುತ್ತಾ,

**ಕವಿಗಳೀಗ ಅರಸು ಗಿರಸುಗಳ ಋಣವಿಲ್ಲ!**
**ಅವನಗ್ನಿಮುಖಿ!**
**ಪ್ರಳಯಶಿಖಿ!**

ಎನ್ನುತ್ತಾರೆ. ಅರಸು ಗಿರಸು ಎಂಬ ಪದ ಬಳಕೆಯ ಹಿಂದಿರುವ ನಿರ್ಭೀತತೆ, ಕವಿಯೊಳಗಿನ ಕಟುಸತ್ಯವಾದಿಯನ್ನು ಪರಿಚಯಿಸುತ್ತದೆ.

**ಕುರಿ ಕುರಿಯ ತಿಂದರದು**
**ಕುರುಬನಿಗೆ ಕೇಡಲ್ತು!**
**ತಿಂದ ಕುರಿ ತಿಂಬ ಕುರಿ**
**ಕುರುಬಗೆರಡುಣಿಸಲ್ತೇ?**
**ಎಲೆ ಧರಣಿ, ನಿಷ್ಕರುಣಿ**

**(ಜಡವಾದಿ)**

ಹೊರಗಿನಿಂದ ಬಂದು ರಾಜ್ಯವನ್ನು ಗೆದ್ದು, ಸಿರಿದೋಚಿ ಬಲಶಾಲಿಗಳಾದವರಿಗಿಂತ ಹೆಚ್ಚು ನೋವು ಕೊಟ್ಟವರನ್ನು ಮೇಲಿನ ರೂಪಕದಲ್ಲಿ

ವಿಡಂಬಿಸಿದ್ದಾರೆ. ನಮ್ಮವರಿಂದಲೇ ನಮ್ಮವರಿಗೆ ಕೇಡೆಂಬ ನಿಂದನೆಯು ಈ ಕವನದಲ್ಲಿ ಅಭಿವ್ಯಕ್ತಗೊಂಡಿದೆ. ಕುವೆಂಪು ಅವರು ವ್ಯವಸ್ಥೆಯನ್ನು ಗ್ರಹಿಸಿದ್ದ ಮತ್ತು ವಿರೋಧಿಸಿದ ಎರಡು ಸಂಗತಿಗಳನ್ನು ಅಭಿವ್ಯಕ್ತಿಸಿರುವ ಕವಿತೆಗಳು ಸಮಸ್ಯೆಯ ಬೇರುಗಳನ್ನು ಗುರುತು ಮಾಡಿ ತೋರುವಲ್ಲಿ ಯಶಸ್ವಿಯಾಗಿದೆ. "ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಯಾಗದೆ ದೇಶಕ್ಕೆ ಕ್ಷೇಮವಿಲ್ಲ ಎಂದು ನಂಬಿದ್ದ ಕುವೆಂಪು ಅವರು ಮಹಾರಾಜರಿಗೆ, ದಿವಾನರಿಗೆ, ಮಂತ್ರಿಗಳಿಗೆ, ಉನ್ನತಾಧಿಕಾರಿಗಳಿಗೆ ಹೆದರದೆ ಜಗ್ಗದೆ ಅವರಿಗೆ ಆಸನ ಕಂಪನವಾಗುವ ರೀತಿಯಲ್ಲಿ ಕವಿತೆಗಳನ್ನು ರಚಿಸಿದ್ದಾರೆ" 1.

ಸ್ವಾತಂತ್ರ್ಯೋತ್ಸಾಹಿ ರಚನೆಗಳು: ಕುವೆಂಪು ಅವರು ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ಬೆಳಗಾಂ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಿ ಗಾಂಧೀಜಿಯವರ ದರ್ಶನ ಪಡೆದು, ಅವರಿಂದ ಪ್ರಭಾವಿತರಾಗಿದ್ದರು. ಜೊತೆಗೆ ಆಚಾರ್ಯ ವಿನೋಬಾ ಭಾವೆ, ಲೋಹಿಯಾ, ಅಂಬೇಡ್ಕರ್, ರಾಜಾ ರಾಮ್ ಮೋಹನರಾಯ್, ಗೋಪಾಲಕೃಷ್ಣ ಗೋಖಲೆ ಅವರ ವಿಚಾರಗಳಿಂದಲೂ ಪ್ರಭಾವಿತರಾಗಿದ್ದರು. ಇದರೊಂದಿಗೆ ಬಂಗಾಳದ ಕ್ರಾಂತಿಗಳಿಂದ ಉತ್ತೇಜಿತರಾಗಿ 'ಪಾಂಚಜನ್ಯ', 'ಕಾಳಿಬರುವಳು', 'ವಿಪ್ಲವಮೂರ್ತಿ', 'ಸತ್ಯಾಗ್ರಹಿ', 'ಭರತಮಾತೆ', 'ಇಂದಿನ ದೇವರು', 'ಕಾಳರಾತ್ರಿ' ಹಾಗೂ 'ರಕ್ತಧುನಿ' ಎಂಬ ಕವನಗಳನ್ನು ರಚಿಸಿದರು. ಆ ಎಲ್ಲಾ ಕವನಗಳು ಈ ಸಂಕಲನದಲ್ಲಿ ಸೇರಿವೆ.

**ನಡೆ ಮುಂದೆ ನಡೆ ಮುಂದೆ**
**ನುಗ್ಗಿ ನಡೆ ಮುಂದೆ!**
**ಜಗ್ಗದೆಯೆ ಕುಗ್ಗದೆಯೆ**
**ಹಿಗ್ಗಿ ನಡೆ ಮುಂದೆ**

ಆತ್ಮವಿಶ್ವಾಸವನ್ನು ಇಮ್ಮಡಿಗೊಳಿಸುವ ಇಂತಹ ಸಾಲುಗಳಿಂದಲೇ ಕ್ರಾಂತಿಕಾರಕ ಮನೋಭಾವ ಸಹೃದಯರನ್ನು ಆವರಿಸಿ ಬಿಡುತ್ತದೆ, ಪರಕೀಯತೆಯಿಂದ ಮುಕ್ತವಾಗುವ ಬಗೆಯನ್ನು ತೋರುತ್ತದೆ.

"ಉತ್ಸಾಹದ ಧಾರ್ಮಿಕ ಅರಿವಿನ ದೇಶಭಕ್ತಿ 'ಪಾಂಚಜನ್ಯ' ಕವನದ ಸತ್ವ ನಿರ್ಭೀತ ತ್ಯಾಗಕ್ಕೆ ಆಹ್ವಾನ ಕೊಡುವುದರೊಂದಿಗೆ ಈ ಕವನ ಆರಂಭವಾಗುತ್ತದೆ"2. ಕುವೆಂಪು ಅವರ ಕ್ರಾಂತಿಕಾರಕ ಭಾವನೆಗಳನ್ನು ಈ ಸಾಲುಗಳು ಸ್ಪಷ್ಟೀಕರಿಸುತ್ತವೆ.

**ಡಮ ಡಮ ಡಮ ಡೋಲು ಬಡಿ!**
**ಭಂ ಭಂ ಭಂ ಶಂಖ ನುಡಿ!**
**ಧಿಮಿ ಧಿಮಿ ಧಿಮಿ ಎಂದು ಕುಣಿ**

**(ಕಾಳಿ ಬರುವಳು)**

**ಕೋವಿಯು ನಾನು,**
**ಸಿಡಿಗುಂಡಾನು,**
**ವೀರನ ಖಡ್ಗವು ನಾನು,**
**ಹರಿಯುವ ರಕ್ತದ ವಾಹಿನಿ ನಾನು!**
**ಲೋಹಿತ ವಿಪ್ಲವದುರಿ ನಾನು!**

**(ವಿಪ್ಲವಮೂರ್ತಿ)**

**ಬನ್ನಿ ಮುಂದಕೆ**
**ಈಜಿ, ಈಜಿ ದಡವ ಸೇರಿ**
**ಬಲುಮೆಯುಳ್ಳೊಡೆ;**
**ಬೆದರುವೊಡೆ, ಬೆಚ್ಚುವೊಡೆ**
**ಮುಳುಗಿ ಸಾಯಿರಿ**

**(ರಕ್ತಧುನಿ)**

ದೇಶಭಕ್ತರ ನರನಾಡಿಗಳನ್ನು ಉದ್ದೀಪಿಸಲು ಬರೆದ ಉಗ್ರವಾದ ಈ ಭಾವಗಳು ಸ್ವಾತಂತ್ರ್ಯ ಸಂಗ್ರಾಮಕ್ಕೆ ರಕ್ತ ಕ್ರಾಂತಿಯೂ ಬೇಕು ಎಂಬುದನ್ನು ಒಪ್ಪಿ-ಒತ್ತಿ ಹೇಳಿದಂತಿದೆ. ಕುವೆಂಪು ಅವರೇ ತಮ್ಮ ಭಾಷಣ ಒಂದರಲ್ಲಿ ಹೇಳಿರುವಂತೆ 'ನಾನು ಲಾಠಿ ಏಟು ತಿನ್ನದಿದ್ದರೂ ಜೈಲು ಸೇರದಿದ್ದರೂ ಆ ಕಾಲದ ಯಾವ ಘಟನೆಗಳು ನನ್ನ ಲೇಖನಿಯಿಂದ ವಂಚಿತವಾಗಿಲ್ಲ' ಎಂಬ ಮಾತುಗಳು ಕುವೆಂಪು ಅವರ ರಾಷ್ಟ್ರೀಯ ಹಿತಾಸಕ್ತಿಯನ್ನು ಮನದಟ್ಟು ಮಾಡಿಕೊಡುತ್ತವೆ.

**ನೂರು ದೇವರನ್ನೆಲ್ಲಾ ನೂಕಾಚೆ ದೂರ**
**ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುತ ಬಾರ!**

ಕವಿ ಕೇವಲ ಆವೇಶದಿಂದ ಆಡಿದ ಮಾತುಗಳಲ್ಲ ಇವು. ನಮ್ಮ ಒಗ್ಗಟ್ಟಿಗೆ ಒಗ್ಗೂಡುವಿಕೆಗೆ ಇರುವ ಅಡ್ಡ ಗೋಡೆ ಮತ ಮೌಢ್ಯತೆ ಅದನ್ನು ಹೊಡೆದುರುಳಿಸಬೇಕು. ದೇವರ ಹೆಸರಿನಲ್ಲಿ ಛಿದ್ರಗೊಂಡಿರುವ ವಿಕೃತಿಗಳನ್ನೆಲ್ಲಾ ಸುಂದರಗೊಳಿಸಬೇಕೆಂದು ಆಡಿದ ನುಡಿಗಳಿವು. ಭಾರತವನ್ನು ಸ್ವರ್ಗವನ್ನಾಗಿ ಪರಿವರ್ತಿಸಿ ದೇಶವನ್ನೇ ದೇವಿಯಾಗಿ ಕಂಡು ದೇಶಾರಾಧನೆಗೆ ಎಲ್ಲರನ್ನೂ ಒಗ್ಗೂಡಿಸುವ ಅವರ ಹಂಬಲದಲ್ಲಿ 'ನವ ಭಾರತದ ಕನಸುಗಾರನಿದ್ದಾನೆ'. ಕಲ್ಲು ದೇವರ ಪೂಜಿಸಿ ಕಲ್ಲಾಗಿ, ಸ್ವಾಭಿಮಾನವಿಲ್ಲದೆ, ಪರಕೀಯತೆಯಲ್ಲಿ ನರಳುವ ದಾಸ್ಯದಿಂದ ದೇಶವನ್ನು ಮುಕ್ತಗೊಳಿಸಬೇಕೆಂಬ ವಾಂಛೆ ಕವನದಲ್ಲಡಗಿದೆ.

ಅಸಮಾನತೆ ವಿರೋಧಿ ಗೀತೆಗಳು: ಕುವೆಂಪು ಅವರು ಎರಡು ಬಗೆಯಾದ ಅಸಮಾನ ನೀತಿಗಳನ್ನು ವಿರೋಧಿಸಿದರು. ಒಂದು ಸಾಮಾಜಿಕ ಅಸಮಾನತೆಯಾದರೆ

ಮತ್ತೊಂದು ಆರ್ಥಿಕ ಅಸಮಾನತೆ. ವರ್ಣಾಶ್ರಮದ ವ್ಯವಸ್ಥೆಗೆ ಅಂದೆಂದಿನಿಂದಲೋ ಬದ್ಧವಾಗಿ ಇಂದಿನವರೆಗೂ ಸಾಗುತ್ತಲೇ ಇರುವ ನಮ್ಮ ಸಾಮಾಜಿಕ ಶ್ರೇಣೀಕರಣವೇ ಬಹುತೇಕ ಭಾರತೀಯ ಸಮಾಜದ ಎಲ್ಲಾ ಕೊರತೆಗಳಿಗೂ ಕಾರಣ ಎಂದು ನಂಬಿದ್ದ ಕವಿ ಕುವೆಂಪು ಅವರು, ಅದೇ ನಮ್ಮ ಆರ್ಥಿಕ ಬಡತನಕ್ಕೂ ಮೂಲ ಎಂದು ಕಂಡುಕೊಂಡಿದ್ದರು. ಅಸಮಾನತೆ, ಹಸಿವುಗಳೆಂಬ ಪೆಡಂಭೂತಗಳನ್ನು ಹೊಡೆದೋಡಿಸಲು ಯಾರ್ಯಾರೋ ಬಂದರೆ ಸಾಲದೆಂಬ ಅರಿವಿರುವ ಕವಿ ಕಾಳಿ, ರುದ್ರ, ಕಲ್ಕಿಯರನ್ನು ಆಹ್ವಾನಿಸಿ ಪೆಡಂಭೂತವನ್ನು ಅಟ್ಟುವ ಸಾಹಸ ಮೆರೆದಿದ್ದಾರೆ.

**ನೋಡು ಬರುತ್ತಲಿರುವಳದೋ**
**ರುದ್ರ ಭದ್ರಕಾಳಿಯು**
**ದೇವಿ, ಚಂಡಿ ಚಾಮುಂಡಿ**
**ರಕ್ತರುಂಡ ಮಾಲಿಯು**

**(ಕಾಳಿ ಬರುವಳು)**

**ಕುಣಿಯುವಳಾರೀ ಭೈರವನಾರಿ**
**ರಣರಂಗದಲ್ಲಿ ರೌದ್ರವ ತೋರಿ**

**(ಭೈರವನಾರಿ)**

**ಸಿರಿಮನೆಗಳನುರುಳಿಸಿ**
**ಬಡ ಜನರನು ಕೆರಳಿಸಿ**
**ಬರುತಲಿದೆ! ಬರುತಲಿದೆ! ವಿ**
**ಪ್ಲವದ ರಕ್ತಧುನಿ**

**(ರಕ್ತಧುನಿ)**

ಎಂತಹ ಭಾವ ತೀವ್ರತೆ! ಪಾಂಚಜನ್ಯದ ಮೊಳಗನ್ನು ಕಿವಿಗೆ ಅಪ್ಪಳಿಸಿ ಬಿಡಬಹುದಾದ ಸಾಲುಗಳಿವು. ಭೈರವನಾರಿ, ರಕ್ತಧುನಿ, ವಿಪ್ಲವಮೂರ್ತಿ, ಕಲ್ಕಿ ಕವನಗಳಲ್ಲಿರುವ ಪ್ರತಿಮೆಗಳು ಸಮಸಮಾಜಕ್ಕೆ ಬೇಕಾದ ಪೂರ್ವ ಸಿದ್ಧತೆಯಾಗಿ ಕಾಣುತ್ತವೆ.

**ಕೂಳನು ಹೆಮ್ಮೆಗೆ ಬಿಸುಡುವರಿಲ್ಲಿ**
**ಹೊಟ್ಟೆಗೆ ಇಲ್ಲದೆ ಕೊರಗುವರಿಲ್ಲಿ**
**ಆ ಕಡೆ ಉದ್ಯಾನ**
**ಈ ಕಡೆ ಶ್ಮಶಾನ!**
**ಪೀತಾಂಬರಗಳ ಹೊದೆಯುವರಿಲ್ಲಿ**
**ಕೌಪೀನಕ್ಕೆ ಚಿಂದಿಯು ಸಿಗದಿಲ್ಲಿ**

ಮತದ ಹೆಸರಿನಲ್ಲಿ ನಡೆಯುವ ಶೋಷಣೆಗಿಂತ ಅಥವಾ ಅಷ್ಟೇ ಕೆಟ್ಟದ್ದು

ಶ್ರೀಮಂತಿಕೆಯ ಶೋಷಣೆ. ವಾಸ್ತವದ ಸ್ಥಿತಿಯನ್ನು ಬಡಜನರಿಗೆ ಮುಟ್ಟಿಸಬೇಕೆಂಬ ತುಡಿತ ಸಾಲು ಸಾಲುಗಳಲ್ಲೂ ಆವರಿಸಿದ್ದು, ಹಸಿವೆಯ ಪರಾಕಾಷ್ಠೆಯೇ 'ಕಲ್ಕಿ'ಯಾಗಿ ಅವತರಿಸುವ ಪ್ರತಿಮೆ ಅದ್ಭುತ ಎನಿಸುತ್ತದೆ. ಒಟ್ಟಾರೆಯಾಗಿ ಬಂಡಾಯ ಕವಿಯ ಶ್ರೇಷ್ಠ ಕ್ರಾಂತಿಗೀತೆಗಳು ಈ ಸಂಕಲನದಲ್ಲಿ ಸೇರಿವೆ.

ಇನ್ನುಳಿದಂತೆ ನೂರಾರು ದೇವತೆಗಳನ್ನೆಲ್ಲಾ ನಂಬುವುದಕ್ಕಿಂತ ಆತ್ಮಶ್ರದ್ಧೆಯೇ ದೊಡ್ಡದೆಂದು, 'ಮಾನವನೇ ದೇವತೆಯು; ನರನು ನಾರಾಯಣನು' ಎಂದು ಅವನ ಅಗಾಧ ಶಕ್ತಿಯನ್ನು ಗುರುತಿಸಿಕೊಳ್ಳಲು ಕರೆ ನೀಡಿದ್ದಾರೆ. ಈ ಎಲ್ಲಾ ರಚನೆಗಳೊಂದಿಗೆ 'ಶ್ರಾವಣ ಸಂಧ್ಯಾ ಸಮೀರಣ' ಆಶಾಕಿರಣವೊಂದನ್ನು ಮೂಡಿಸುತ್ತದೆ. 'ಬಾರ, ಸಮೀರ ಮುಕ್ತಿಯಮಲ್ಲ!' ಎಂಬ ಮಾತುಗಳು ಕಾಲಾಂತರದಲ್ಲಿ ಎಲ್ಲಾ ನೋವುಗಳು ಮಾಸುತ್ತವೆಂಬ ಸದಾಶಯವನ್ನು ಒಳಗೊಂಡು ರಚನೆಯಾಗಿದೆ. ಕುವೆಂಪು ಅವರ ಅದ್ಭುತ ಭಾಷಾಶೈಲಿಯನ್ನು, ಅವರ ಮಾತಿನ ಪ್ರಖರತೆಯನ್ನು ಪರಿಚಯಿಸುವ ಈ ಸಂಕಲನ ಗಣ, ಪ್ರಾಸ, ಉಪಮೆ-ರೂಪಕಗಳನ್ನು ಸಮರ್ಪಕವಾಗಿ ಒಳಗೊಂಡಿದ್ದು, ತಾಳದ ಗತಿಗೆ ತಕ್ಕಂತೆ ಪ್ರವಹಿಸುವ ಭಾವಲಹರಿ ಕವನಗಳ ಓದಿಗೆ ಹೊಸ ಚೈತನ್ಯ ನೀಡುತ್ತದೆ.

**ಪರಾಮರ್ಶನ ಕೃತಿಗಳು:**


1. ಕುವೆಂಪು, (1933), ಪಾಂಚಜನ್ಯ, ಮೈಸೂರು: ಉದಯ ರವಿ ಪ್ರಕಾಶನ.
2. ಕೃಷ್ಣಕುಮಾರ್ ಸಿ. ಪಿ., (2004), ಕುವೆಂಪು ಸಾಹಿತ್ಯ ಸಂವಾದ, ಮೈಸೂರು: ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ.
3. ನರಹಳ್ಳಿ ಬಾಲಸುಬ್ರಹ್ಮಣ್ಯಂ, (2004), ಬಾ ಕುವೆಂಪು ದರ್ಶನಕೆ, ಬೆಂಗಳೂರು: ಅಂಕಿತ ಪುಸ್ತಕ.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.